# ಈ ಪರಿಯ ಸೊಬಗಾವ ದೇವರಲಿ ನಾ ಕಾಣೆ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
4. **Note:** The wordings mentioned without highlights are as per Ref. 1. The wordings as per Ref. 2 are almost similar to Ref. 1 except few wordings, which are given in yellow highlights. The wordings as per Ref. 3 are same as Ref. 2.
5. Note: The singer has followed lyrics as in Ref. 2.

ರಾಗ ರೇಗುಪ್ತಿ ತಾಳ ಝಂಪೆ

ಈ ಪರಿಯ ಸೊಬಗಾವ ದೇವರಲಿ ನಾ ಕಾಣೆ
ಗೋಪೀಜನ ಪ್ರಿಯ ಗೋಪಾಲಗಲ್ಲದೆ || ಪ ||

ದೊರೆಯತನದಲಿ ನೋಡೆ ಧರಣಿ ದೇವಿಯ ರಮಣ
ಸಿರಿಯತನದಲಿ ನೋಡೆ ಶ್ರೀಕಾಂತನು
ಹಿರಿಯತನದಲಿ ನೋಡೆ ಸರಸಿಜೋದ್ಭವನಯ್ಯ
ಗುರುವುತನದಲಿ ನೋಡೆ ಜಗದಾದಿ ಗುರುವು || ೧ ||

ಪಾವನತ್ವದಿ ನೋಡೆ ಅಮರ ಗಂಗಾ ಜನಕ
ದೇವತ್ವದಲಿ ನೋಡೆ ದಿವಿಜರೊಡೆಯ
ಲಾವಣ್ಯದಲಿ ನೋಡೆ ಲೋಕ ಮೋಹಕನಯ್ಯ
ಆವ ಧೈರ್ಯದಿ ನೋಡೆ ಅಸುರಾಂತಕ || ೨ ||

ಗಗನದಲಿ ಸಂಚರಿಪ ಗರುಡ (ದೇವನೆ ತುರಗ) (ವಾಹನನೀತ)

ಜಗತೀಧರ (ಶೇಷ) (ಅಹಿಪ) ಪರಿಯಂಕ ಶಯನ
ನಿಗಮಗೋಚರ ಪುರಂದರ ವಿಠಲಗಲ್ಲದೆ
ಮಿಗಿಲಾದ ದೈವಗಳಿಗೀ ಭಾಗ್ಯವುಂಟೇ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಗುರುವುತನದಲಿ ನೋಡೆ ಜಗದಾದಿ ಗುರುವು :-**

ಬ್ರಹ್ಮಾಂತ ಗುರುವಃ ಸಾಕ್ಷಾತ್ ಇಷ್ಟಮ್ ದೈವಂ ಶ್ರಿಯಃ ಪತೀ
ಆಚಾರ್ಯಾ ಶ್ರೀಮದಾಚಾರ್ಯ ಸಂತುಮೇ ಜನ್ಮ ಜನ್ಮನಿ ||

ಹೀಗೆ ದಿನಾಲು ಗುರು ಪರಂಪರೆಯನ್ನು ಸ್ಮರಿಸುವ ರೂಢಿಯಿದೆ. ಇದರಲ್ಲಿ ಬ್ರಹ್ಮನು ಮುಖ್ಯ ಗುರು; ಅವನ ತಂದೆ ಶ್ರೀ ಹರಿ ಆದಿ ಗುರು. ಕೃಷ್ಣನೇ ಜಗದ್ಗುರು. ನಾರಾಯಣನಿಂದಲೇ ಮೊದಲಾಗುತ್ತವೆ;

**ಅಮರಗಂಗಾ** – ಸುರನದಿಯಾದ ಗಂಗೆ; ತ್ರಿವಿಕ್ರಮಾವತಾರದಲಿ ಅವನ ಅಡಿಗಳಿಂದ ಹೊರಬಂದ ನದಿ.

**ದಿವಿಜರು** = ದೇವತೆಗಳು

**ದಿವಿಜರೊಡೆಯ** – ದೇವತೆಗಳಿಗೆಲ್ಲ ಅಂತರ್ಯಾಮಿ; ನಿಯಾಮಕ, ಪ್ರೇರಕ.

**ಆವ** – ಯಾವ ಬಗೆಯದಾದರೂ, ಕಾವ (ಕಾಪಿಡುವ) ಎಂದು ಪಾಠಾಂತರ.

**ಜಗತೀಧರ ಶೇಷ** – ಜಗತ್ತನ್ನು ಹೊತ್ತಿರುವ ಆದಿಶೇಷನೇ ಮಂಚ (ಪರ್ಯಂಕ).

**ನಿಗಮಗೋಚರ** – ವೇದವೇದ್ಯ.

**ಪರಿಯಂಕ** = ಮಂಚ

**ಶ್ರೀಕಾಂತ** = ಲಕ್ಷ್ಮೀ ರಮಣ

**ಪಾವನತ್ವ** = ಪಾವಿತ್ರ್ಯ

**ಲೋಕ ಮೋಹಕ** = ಕಾಮ

**ಅಹಿಪ** = ಆದಿಶೇಷ

**Classification:** Keerthane
**Ankita:** purandara vittala

**Location:** NA
**Category:** Vishnu Stuti
**Group Words:** Vishnu, garuda, shesha, bhumi, devi, deva, asura, akasha, gange, loka, kudure, Gopala,
**Pravachana:** Vid Anantha Krishna Acharya
**Explanation:** NA